ಈ)	ನಿಗಮ	ಉದ್ಯೋಗಿಗಳ ಸಂಖ್ಯೆ
1)	ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ	1) 790 ನೌಕರರು ಹಾಗೂ 1948 ಖಾಯಂ ರಬ್ಬರ್ ಕೆಲಸಗಾರರು
2)	ಕರ್ನಾಟಕ ಪಲ್ಪ್ ವುಡ್ ಲಿಮಿಟೆಡ್	183
3)	ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ	358
4)	ಮೈಸೂರು ಮ್ಯಾಚ್ ಕಂಪನಿ	03
5)	ಕರ್ನಾಟಕ ರಾಜ್ಯ ವೀನಿಯಲ್ಸ್ ಲಿಮಿಟೆಡ್	177
6)	ಕರ್ನಾಟಕ ಗೇರು ಅಭಿವೃದ್ಧಿ ನಿಗಮ	152

ಈಗ ಸದ್ಯ ಈ ಎಲ್ಲಾ ನಿಗಮಗಳೂ ನಷ್ಟದಲ್ಲಿವೆ.

ರಾಜ್ಯದಲ್ಲಿ ಕಳ್ಳ ಸಾಗಾಣಿಕೆ ಶ್ರೀಗಂಧದ ಮರಗಳು.

2265(2751) ಶ್ರೀ ರಾಜು ಗೌಡ ಕೆ. (ಹನ್ನೂರು) :— ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಶ್ರೀಗಂಧದ ಮರಗಳನ್ನು ಕಳ್ಳ ಸಾಗಾಣಿಕೆ ಮಾಡುತ್ತಿದ್ದಾಗ ಎಷ್ಟು ಪ್ರಮಾಣದ ಮರಗಳನ್ನು ಇಲಾಖೆಯವರು ವಶ ಪಡಿಸಿಕೊಂಡಿದ್ದಾರೆ?

ಆ) ವಶಪಡಿಸಿಕೊಂಡಿರುವ ಶ್ರೀಗಂಧದ ಮರಗಳನ್ನು ತಕ್ಷಣ ಮಾರಾಟ ಮಾಡಲು ತೊಂದರೆಯೇನು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

ಅ) ವಿವರಗಳು ಈ ಕೆಳಕಂಡಂತೆ ಇರುತ್ತದೆ.

ವರ್ಷ	ವಶಪಡಿಸಿಕೊಂಡ ವಾಹನಗಳ ಸಂಖ್ಯೆ	ವಶಪಡಿಸಿಕೊಂಡ ಶ್ರೀಗಂಧದ ಪ್ರಮಾಣ ಮೆ. ಟನ್ನುಗಳಲ್ಲಿ
1998-1999	699	52.284
1999-2000	1241	76.754
2000-2001	1336	52.383

ಅ) ಕೆಲವು ಪ್ರಕರಣಗಳು ನ್ಯಾಯಾಲಯದಲ್ಲಿರುವುದರಿಂದ ಅವು ಅಂತಿಮವಾಗಿ ಇತ್ಯರ್ಥಗೊಳ್ಳುವವರೆಗೆ ಪ್ರತಿ ಸಾರಿ ಕೋರ್ಟಿನಲ್ಲಿ ಪ್ರಕರಣ ಬಂದಾಗ ಸಾಕ್ಷಿಗಾಗಿ ಶ್ರೀಗಂಧವನ್ನು ಹಾಜರುಪಡಿಸಬೇಕಾಗಿರುವುದರಿಂದ ಶ್ರೀಗಂಧವನನ್ನು ಮಾರಾಟ ಮಾಡಲು ಬರುವುದಿಲ್ಲ. ನ್ಯಾಯಾಲಯದಿಂದ ಇತ್ಯರ್ಥವಾದ ಕೂಡಲೇ ಮಾರಾಟ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಉಳಿದ ಪ್ರಕರಣಗಳಲ್ಲಿ ಮುಟ್ಟುಗೋಲು ಹಾಕಿಕೊಂಡ ಶ್ರೀಗಂಧವನ್ನು ಶ್ರೀಗಂಧದ ಡಿಪೋಗೆ ಸಾಗಿಸಿ ಮಾರಾಟ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಮೈಸೂರು ನಗರದಲ್ಲಿರುವ ಪ್ರಾಣಿ ಸಂಗ್ರಾಹಾಲಯವನ್ನು ಅಭಿವೃದ್ಧಿಗೊಳಿಸುವುದು.

2266(3396) ಶ್ರೀ ಎ. ರಾಮದಾಸ್ (ಮೈಸೂರು) :— ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರದಲ್ಲಿರುವ ಪ್ರಾಣಿ ಸಂಗ್ರಹಾಲಯದ ಅಭಿವೃದ್ಧಿಗಾಗಿ ಕೈಗೊಂಡಿರುವ ಕ್ರಮಗಳೇನು?

2) ಪ್ರಾಣಿ ಸಂಗ್ರಹಾಲಯದಲ್ಲಿರುವ ವಿವಿಧ ಪ್ರಾಣಿಗಳ ಸಂಖ್ಯೆ ಎಷ್ಟು; ಅಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಇ) ವಾರ್ಷಿಕವಾಗಿ ಪ್ರಾಣಿ ಸಂಗ್ರಹಾಲಯದಿಂದ ಸಂಗ್ರಹವಾಗುತ್ತಿರುವ ಹಣ ಎಷ್ಟು?

ಶ್ರೀ ಕೆ.ಪಿ. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

ಪ್ರಾಣಿಗಳ ವೈವಿಧ್ಯತೆ ಹೆಚ್ಚಿಸಲು ಪ್ರಾಣಿಗಳನ್ನು ಕೊಡುಗೆಯಾಗಿ ಸ್ವೀಕರಿಸುವ ನಿರಂತರ ಪ್ರಯತ್ನ ಮಾಡಲಾಗುತ್ತಿದೆ. ವಿನಾಶದ ಅಂಚಿನಲ್ಲಿರುವ ಪ್ರಾಣಿಗಳ ಸಂತಾನಾಭಿವೃದ್ಧಿಯನ್ನು ಯಶಸ್ವಿಯಾಗಿ ಅಭಿವೃದಧಿ ಪಡಿಸಿದೆ. ಮೈಸೂರು ಮೃಗಾಲಯ ಕಾರಂಜಿ ಕೆರೆಯಲ್ಲಿ ತೆರೆದ ಪತಂಗಗಳ ಉದ್ಯಾನವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಕಾರಂಜಿ ಕೆರೆಯಲ್ಲಿ ಪಕ್ಷಿಗಳ ಉದ್ಯಾನವನ್ನು ಅಭಿವೃದ್ಧಿಗೊಳಿಸಲು ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಮೃಗಾಲಯದಲ್ಲಿ ಸ್ಟೀಲ್ ಫ್ಯಾಬ್ರಿಕೇಶನ್ ದುರಸ್ತಿ ಕಾರ್ಯಗಳ ವಿಳಂಬವನ್ನು ತಪ್ಪಿಸಲು ಸಣ್ಣ ವರ್ಕ್‌ಶಾಪ್ ತೆರೆಯಲು ಉದ್ದೇಶಿಸಲಾಗಿದೆ. ಶೈಕ್ಷಣಿಕ ಕಾರ್ಯಕ್ರಮಗಳ ಜ್ಯೂನೀಯರ್ ತರಬೇತಿ ಕಾರ್ಯಕ್ರಮ ಮತ್ತು ಮೃಗಾಲಯ ಸಿಬ್ಬಂದಿ ವರ್ಗದವರನ್ನು ಪ್ರಾಣಿಗಳ ನಿರ್ವಹಣೆಯಲ್ಲಿ ತರಬೇತಿ ಪಡೆಯಲು ಇತರ ಮೃಗಾಲಯಗಳು ಹಾಗೂ ಸಂಶೋಧನಾ ಸಂಸ್ಥೆಗಳಿಗೆ ನಿಯೋಜಿಸಲಾಗುತ್ತಿದೆ.

ವೀಕ್ಷಕರಿಗೆ ಕುಡಿಯಲು ಶುದ್ಧ ನೀರು ಮತ್ತು ಶೌಚಾಲಯ ಸವಲತ್ತುಗಳನ್ನು ಒದಗಿಸಲಾಗಿದೆ.